# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 34/2018**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಸೈಯದ ಅಕ್ರಮ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಮುಕ್ಬುಲ್ ಅಹ್ಮದ್ | | **06.03.2021** |
| **ವಯಸ್ಸು** | ಃ 27 ವರ್ಷ | | |
| **ವೃತ್ತಿ** | ಃ ಪೇಂಟರ್ ಕೆಲಸ | **ಪ್ರಾ.ಸಾ.** | ಃ 22 |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ 27 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ *15* ವರ್ಷಗಳಿಂದ ಬೀರು ಪೇಂಟರ್ ಕೆಲಸ ಮಾಡುಕೊಂಡಿದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇಲ್ಲ. ಆರೋಪಿಗಳು ಜಮೀಲ್ ಅವರ ಸ್ನೇಹಿತರು ಎಂದು ತಿಳಿದಿದ್ದೇನೆ. *10* ನೇ ಆರೋಪಿ ಕಾಸಿಂ ಗೊತ್ತಿಲ್ಲ. ಘಟನೆ ಬಗ್ಗೆ ಮಾಹಿತಿ ಇಲ್ಲ. ನಾನು ತನಿಖಾಧಿಕಾರಿ ಸಮಕ್ಷಮ ಹೇಳಿಕೆ ಕೊಟ್ಟಿಲ್ಲ. ಪೋಲಿಸರ ಒತ್ತಡದ ಮೇರೆಗೆ ನಾನು ನ್ಯಾಯಾಲಯದಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಹೇಳಿಕೆಯನ್ನು ನಿಪಿ-*34* ಹಾಗೂ ನನ್ನ ಸಹಿಯನ್ನು ನಿಪಿ-*34(ಎ)* ಎಂದು ಗುರುತಿಸಲಾಯಿತು. ನಿಪಿ-*34* ರ ಅಂಶಗಳ ಬಗ್ಗೆ ಮಾಹಿತಿ ಇಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

ಈಗ ಸುಮಾರು *5* ವರ್ಷಗಳ ಹಿಂದೆ *1* ರಿಂದ *4* ನೇ ಆರೋಪಿಗಳು ಜಮಿಲ್ ಅವರ ಟಿವಿ ಅಂಗಡಿಗೆ ಬರುತ್ತಿದ್ದು ನನಗೆ ಪರಿಚಯ ಇದ್ದರು ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರು ಇರುವ *1* ರಿಂದ *4* ನೇ ಆರೋಪಿಗಳ ಪರಿಚಯ ನನಗೆ ಇದೆ ಎಂದರೆ ಸರಿಯಲ್ಲ. ನಾನು ಮಾರ್ಚ್ *2016* ರಂದು ಜಮಿಲ್ ಅವರ ಟಿವಿ ಅಂಗಡಿಗೆ ಹೋದಾಗ *1* ರಿದ *4* ಮತ್ತು *10* ನೇ ಆರೋಪಿಗಳು ಹಿಂದು ಮುಖಂಡರನ್ನು ಆರಿಸಿಕೊಂಡು ಒಬ್ಬೊಬ್ಬರನ್ನು ಹಲ್ಲೆ ಮಾಡಿದರೆ ಮುಸ್ಲಿಂ

ಜನಾಂಗದ ತಂಟೆಗೆ ಬುರುವುದಿಲ್ಲ ಎಂದು ನನ್ನ ಸಮಕ್ಷಮ ಮಾತನಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ಸ್ವಲ್ಪ ದಿನಗಳ ನಂತರ ನನಗೆ ಪರಿಚಯ ಇದ್ದ ಕಾಸಿಂ ಅವರ ಜೊತೆಯಲ್ಲಿ ಟಿವಿಎಸ್ ವಿಕ್ಟರ್ ಬೈಕ್ ನಲ್ಲಿ ಅಯುಬ್ ಅವರ ಗ್ಯಾಸ ಅಂಗಡಿ ಮುಂದೆ ಹೋಗುತ್ತಿದ್ದಾಗ *1,2* ಮತ್ತು *3* ನೇ ಆರೋಪಿಗಳು ನಿಂತು ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. *1* ನೇ ಆರೋಪಿ ನಮ್ಮನ್ನ ಕರೆದ ಕಾರಣ ನಾವು ಸ್ಥಳಕ್ಕೆ ಹೋಗಿದ್ದೇನೆ ಎಂದರೆ ಸರಿಯಲ್ಲ. *1* ನೇ ಆರೋಪಿ *10* ನೇ ಆರೋಪಿಯನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ *2* ಮತ್ತು *3* ನೇ ಆರೋಪಿಗಳನ್ನು ಕರೆದು ಮಾತನಾಡಿಕೊಳ್ಳುವಾಗ ನಾನು ಬೈಕ್ ನಲ್ಲಿ ಕುಳಿತುಕೊಂಡಿದ್ದೆ ಎಂದರೆ ಸರಿಯಲ್ಲ. ಒಳ್ಳೆ ಕೆಲಸ ಮಾಡುವ ಬಗ್ಗೆ ಹೇಳಿ *10* ನೇ ಆರೋಪಿ ತನ್ನ ಬಳಿ ಇದ್ದ ಬೈಕ್ ನ್ನು *1* ನೇ ಆರೋಪಿಗೆ ಕೊಡುವುದಾಗಿ ಹೇಳಿ ನನ್ನನ್ನು ನನ್ನ ಮನೆಯ ಬಳಿ ಬಿಟ್ಟು ಹೋಗಿದ್ದಾನೆ ಎಂದರೆ ಸರಿಯಲ್ಲ. ನಂತರದಲ್ಲಿ ಎಲ್ಲಾ ಆರೋಪಿಗಳು ಸಂಚು ಮಾಡಿ ಇತರೆ ಆರೋಪಿಗಳ ಜೊತೆ ಸೇರಿ ಆರ್ ಎಸ್ ಎಸ್ ರಾಜು ಅವರನ್ನು ಕೊಲೆ ಮಾಡಿದ ಬಗ್ಗೆ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಆರ್ ಎಸ್ ಎಸ್ ರಾಜು ಅವರನ್ನು ಕೊಲೆ ಮಾಡಿದ ನಂತರ ಬೈಕ್ ನ ಬಿಡಿಬಾಗಗಳನ್ನು ವಿಲೇವಾರಿ ಮಾಡಿ ಉಳಿದ ಬಿಡಿಬಾಗಗಳನ್ನು ಪಾಂಡವಪುರದ ವಾಸಿ ಮುನಾವರ್ ಪಾಷಾ ಅವರಿಗೆ ಸುರಕ್ಷಿತವಾಗಿ ಇಡಲು ಕೊಟ್ಟಿದ್ದನ್ನು ಪೋಲಿಸರು ವಶಪಡಿಸಿಕೊಂಡ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ನಿಪಿ-*35* ರಂತೆ ಪೋಲಿಸರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಜನಾಂಗದ ವ್ಯಕ್ತಿಗಳು ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿ ಪರ ವಕೀಲರು ಇಲ್ಲ ಎಂದು ಹೇಳಿದ್ದಾರೆ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*

***SC No.***
***PW-00***

**ಮುಂದು ವರೆದ ಮುಖ್ಯ ವಿಚಾರಣೆ ಃ**

**ಪಾಟೀ ಸವಾಲು ಸರಕಾರಿ ಅಭಿಯೋಜಕರಿಂದ ಃ**

**ಪಾಟೀ ಸವಾಲು 1 ರಿಂದ 7 ನೇ ಆರೋಪಿತರ ವಕೀಲರಾದ ಶ್ರೀ ಎಂಸಿಎಚ್ ರವರಿಂದಃ**

***ಮರು ವಿಚಾರಣೆಃ- ಇಲ್ಲ.***

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

**03.08.2015**

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***

**ಮೇಲ್ಕಂಡ ಪಾಟೀ ಸವಾಲನ್ನು ತಮ್ಮದೆಂದು ತಿಳಿದುಕೊಳ್ಳಲು ನ್ಯಾಯಾಲಯಕ್ಕೆ ವಿನಂತಿಸಿಕೊಳ್ಳುತ್ತಾರೆ ವಿನಂತಿಯನ್ನು ಪರಿಗಣಿಸಲಾಗಿದೆ.**

SC NO. 00/00
PW - 00

## *IN THE COURT OF THE IV ADDL. DISTRICT AND SESSIONS JUDGE, MYSURU*

## S.C. /20

| | | | |
|---|---|---|---|
| DEPOSITION OF | : | | DULY SWORN ON |
| FATHERS NAME | : | | 03.08.2015 |
| AGE | : | YEARS: | |
| PROFESSION | : | | P.W. : |
| RESIDENCE | : | | C.W. : |

***EXAMINATION IN CHIEF BY PUBLIC PROSECUTOR :***

***(At this stage P.P. seeks permission to treat the witness hostile. Perused the statement before the police and permitted)***

***CROSS EXAMINATION BY PUBLIC PROSECUTOR :***

***CROSS EXAMINATION BY ADVOCATE FOR ACCUSED :***

**Re examination**: Nil

**TYPED TO MY DICTATION IN THE OPEN COURT.**

***R. O. I. & A. C.,***

**03.08.2015**
***IV ADDL. DISTRICT AND SESSIONS JUDGE,***
***MYSURU.***